

بسم اللهِ الرّحمٰن الرّحيم

# ಅಹ್ಮದಿಯತ್: ದ್ವೇಷವನ್ನು ಗುಣಪಡಿಸುವುದು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–05–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಫೆಲಸ್ತೀನಿನಲ್ಲಿ ನಡೆಯುತ್ತಿರುವ ಕೋಲಾಹಲ ಸಮೇತ ಲೋಕದಲ್ಲಿ ನಡೆಯುತ್ತಿರುವ ಎಲ್ಲ ಗಲಭೆಗಳಿಗೆ ಮತ್ತು ಜಗಳಗಳಿಗೆ ಕಾರಣಕರ್ತರು ಖಾದಿಯಾನಿಗಳು ಎಂದು ಕೆಲವು ದಿನಗಳ ಹಿಂದೆ ಒಬ್ಬ ಮೌಲವಿ ಸಾಹಿಬ್ ಸೋಶಿಯಲ್ ಮೀಡಿಯದಲ್ಲಿ ಹೇಳುತ್ತಿದ್ದರು. ಆದ್ದರಿಂದ ಅಹ್ಮದಿಯರನ್ನು ಹೊಡೆಯುವುದು, ಕೊಲ್ಲುವುದು ಎಲ್ಲವೂ ಅನುಮತನೀಯ ಎಂದು ಅವರು ಹೇಳುತ್ತಿದ್ದರು. ಅಹ್ಮದಿಯ್ಯತ್ತಿನ ಆರಂಭದಿಂದಲೇ ಈ ಮಾತುಗಳನ್ನೇ ಈ ಸತ್ಯನಿಷೇಧಿಗಳ ಮುಖಂಡರು ಹೇಳುತ್ತಾ ಬಂದಿದ್ದಾರೆ. ಆದರೆ ಅವರು ಈ ಎಲ್ಲ ದೌರ್ಜನ್ಯಕರವಾದ ಕೃತ್ಯಗಳನ್ನು ಮಾಡಿದರೂ ಸಹನೆಯನ್ನು ಕೈಗೊಳ್ಳಬೇಕು ಮತ್ತು ಪ್ರಾರ್ಥನೆಯನ್ನು ಮಾಡಬೇಕೆಂದು ನಮಗೆ ಕಲಿಸಿಕೊಟ್ಟ ಮಸೀಹ್ ಮತ್ತು ಮಹ್‌ದಿಯನ್ನು ನಾವು ನಂಬುವವರಾಗಿದ್ದೇವೆ ಎಂಬುದಕ್ಕೆ ಅಲ್ಲಾಹನಿಗೆ ಲಕ್ಷಗಟ್ಟಲೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಎದುರಾಳಿಗಳಿಗಾಗಿಯೂ ದುಆ ಮಾಡಬೇಕು ಎಂದು ಮಸೀಹ್ ಮೌಊದ್[ಅ] ಹೇಳಿದ್ದರ ಬಗ್ಗೆ ನಾನು ಈದ್ ಖುತ್ಬದಲ್ಲೂ ಪ್ರಸ್ತಾಪಿಸಿದ್ದೆ.

ಈ ವಿರೋಧವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಕಾಲದಿಂದಲೇ ಶುರುವಾಗಿದೆ. ಅವರ ಮೇಲೆ ಸಹ ಹಲ್ಲೆಗಳನ್ನು ನಡೆಸಲಾಗಿದ್ದುವು. ಅವರ ಮಾತುಗಳನ್ನು ಆಲಿಸುವುದರಿಂದ ಮತ್ತು ಜಲ್ಸಗಳಿಗೆ ಬರುವುದರಿಂದ ಜನರನ್ನು ತಡೆಯಲಾಗುತ್ತಿತ್ತು. ಹೀಗಿದ್ದರೂ ಹಝ್ರತ್ ಮಸೀಹ್ ಮೌಊದ್[ಅ] ಈ ದೌರ್ಜನ್ಯಗಾರರಿಗಾಗಿ ಪ್ರಾರ್ಥನೆಯನ್ನು ಮಾಡಿದರು. ಈ ಪ್ರಾರ್ಥನೆಗಳ ಕಾರಣದಿಂದಲೇ ಅವರಲ್ಲಿ ಕೆಲವು ವಿರೋಧಿಗಳು ಸತ್ಯವನ್ನು ಅಂಗೀಕರಿಸಿಕೊಂಡು ಜಮಾಅತಿಗೆ ಪ್ರವೇಶಿಸಿದ್ದರು ಮತ್ತು ಈಗಲೂ ಪ್ರವೇಶಿಸುತ್ತಿದ್ದಾರೆ. ಒಟ್ಟಿನಲ್ಲಿ, ಜನಸಾಮಾನ್ಯ ಮುಸ್ಲಿಮರಿಗಾಗಿ ಅವರ ಕಠಿಣವಾದ ಮಾತುಗಳನ್ನು ಕೇಳಿದ ನಂತರವೂ ನಾವು ದುಆ ಮಾಡುತ್ತೇವೆ. ಅವರು ಕಷ್ಟತೆಗಳಿಗೆ ಸಿಲುಕುವಾಗ ನಮಗೆ ದುಃಖವಾಗುತ್ತದೆ. ಇದಕ್ಕೆ ಕಾರಣ ಹಝ್ರತ್ ಮಸೀಹ್ ಮೌಊದ್[ಅ] ನಮಗೆ ಕಲಿಸಿಕೊಟ್ಟ ಶಿಕ್ಷಣವಾಗಿದೆ. ಸಾಮಾನ್ಯ ಮುಸ್ಲಿಮರು ಮಾಡುತ್ತಿರುವ ದೌರ್ಜನ್ಯಕ್ಕೆ ಕಾರಣ ಅವರ ತಪ್ಪುಗ್ರಹಿಕೆ ಮತ್ತು ಹಝ್ರತ್ ಪೈಗಂಬರ್[ಸ]ರೊಂದಿಗೆ ಅವರಿಗೆ ಇರುವ ಪ್ರೇಮವಾಗಿದೆ ಎಂದು ಅಲ್ಲಾಹನು ಅವರಿಗೆ ತಿಳಿಸಿಕೊಟ್ಟನು. ಆದ್ದರಿಂದ ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡಬಾರದು.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ನಾನು ಸಣ್ಣವನಾಗಿದ್ದೆ. ಹಝ್ರತ್ ಮಸೀಹ್ ಮೌಊದ್[ಅ] ಲಾಹೋರಿನಲ್ಲಿ ಒಂದು ಆಮಂತ್ರಣದಿಂದ ಮರಳಿ ಬರುತ್ತಿದ್ದರು. ಆಗ ಜನರು ಮಾರ್ಗ ಮಧ್ಯೆ ಅವರನ್ನು ಬೈಯ್ಯುತ್ತಿದ್ದರು. ಒಂದು ಕೈ ಕಡಿಯಲ್ಪಟ್ಟ ಒಬ್ಬ ಮುದುಕ ತನ್ನ ಆರೋಗ್ಯವಂತ ಕೈಯಿಂದ ಮುರಿದ ಕೈಯ ಮೇಲೆ ಹೊಡೆಯುತ್ತಾ ಪಂಜಾಬಿಯಲ್ಲಿ ಮಿರ್ಝಾ ನಠ್ ಗಯಾ, ಎಂದರೆ ಮಿರ್ಝಾ ಓಡಿಹೋದನು ಎಂದು ಹೇಳುತ್ತಿದ್ದನು. ಅದೇ ರೀತಿಯಲ್ಲಿ ಲಾಹೋರ್ ಪಟ್ಟಣದಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರ ಮೇಲೆ ಹಲ್ಲೆ ಕೂಡ ನಡೆಯಿತು. ಕಲ್ಲುಗಳನ್ನೂ ತೂರಲಾಯಿತು.

ಜನಸಾಮಾನ್ಯರ ಈ ಶತ್ರುತ್ವ ಮತ್ತು ವಿರೋಧಕ್ಕೆ ಕಾರಣ ಮುಹಮ್ಮದ್ ಪೈಗಂಬರ್[ಸ]ರೊಂದಿಗೆ ಇವರಿಗೆ ಇರುವ ಹೃದಯಬಂಧ ಮತ್ತು ಪ್ರೇಮದ ಭಾವನೆಯಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ನಮ್ಮೊಳಗೆ ಹಝ್ರತ್ ಪೈಗಂಬರ್[ಸ]ರೊಂದಿಗೆ ಇರುವ ಪ್ರೇಮದ ಬೆಂಕಿ ಉರಿಯುತ್ತಿದೆ ಎಂದು ಅವರಿಗೆ ಗೊತ್ತಾದರೆ ಬೇಗನೇ ಅವರು ಅಹ್ಮದಿಯರ ಪಾದಗಳಲ್ಲಿ ಬೀಳುವರು. ಅಂತಹ ಬೆಂಕಿ ಅವರಲ್ಲಿ ಲಕ್ಷಾಂತರ ಜನರಲ್ಲಿ ಕೂಡ ಇಲ್ಲ. ಈ ವಿರೋಧಿಗಳು ನಿಮ್ಮ ಸಹೋದರರಾಗಿರುವರು ಎಂದು ನೀವು ನೆನಪಿಡಬೇಕು. ಅವರು ಯಾವುದೋ ತಪ್ಪುಗ್ರಹಿಕೆಗೆ ಒಳಪಟ್ಟಿರುವರು. ಆದ್ದರಿಂದ ನೀವು ನಿರಾಶೆ ಹೊಂದುವುದಕ್ಕೆ ಬದಲಾಗಿ ಅವರಿಗಾಗಿ ದುಆ ಮಾಡಬೇಕು.

ಹಝ್ರತ್ ಮೌಲವಿ ಅಬ್ದುಲ್‌ಕರೀಂ ಸಾಹಿಬ್ ಹೇಳುತ್ತಾರೆ: ನಾನು ಮನೆಯ ಮೇಲಿನ ಮಹಡಿಯಲ್ಲಿ ತಂಗಿದ್ದೆ. ಹಝ್ರತ್ ಮಸೀಹ್ ಮೌಊದ್[ಅ] ಮನೆಯ ಕೆಳಗಿನ ಅಂತಸ್ತಿನಲ್ಲಿ ಇರುತ್ತಿದ್ದರು. ಒಂದು ರಾತ್ರಿ, ಪ್ರಸವ ವೇದನೆಯಿಂದ ಸ್ತ್ರೀಯೊಬ್ಬಳು ಅಳುವಂತಹ ಶಬ್ದ ಕೇಳಿಬಂತು. ನಾನು ಕಿವಿಗೊಟ್ಟು ಆಲಿಸಿದಾಗ ಅದು ಹಝ್ರತ್ ಮಸೀಹ್ ಮೌಊದ್[ಅ] ದುಆ ಮಾಡುತ್ತಿರುವ ಶಬ್ದ ಎಂದು ನನಗೆ ಗೊತ್ತಾಯಿತು. "ಹೇ ಅಲ್ಲಾಹ್, ಪ್ಲೇಗ್ ರೋಗ ಹರಡಿದೆ. ಜನರು ಇದರ ಕಾರಣದಿಂದ ಸಾಯುತ್ತಿದ್ದಾರೆ. ಇವರೆಲ್ಲರೂ ಮೃತಪಟ್ಟರೆ ನಿನ್ನನ್ನು ಯಾರು ನಂಬುವರು" ಎಂದು ಅವರು ದುಆ ಮಾಡುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ನೋಡಿರಿ, ಪ್ಲೇಗ್ ರೋಗವು ಹಝ್ರತ್ ಮಸೀಹ್ ಮೌಊದ್[ಅ]ರ ಸತ್ಯತೆಯನ್ನು ಪ್ರಕಟಗೊಳಿಸಲಿಕ್ಕಾಗಿ ಬಂದಿದ್ದ ದೃಷ್ಟಾಂತವಾಗಿತ್ತು. ಹೀಗಿದ್ದರೂ ಅವರು ಅಲ್ಲಾಹನ ಮುಂದೆ ವಿನಮ್ರತೆಯಿಂದ ಅಂಗಲಾಚುತ್ತಾ ಜನರಿಗಾಗಿ ದುಆ ಮಾಡುತ್ತಾರೆ. ಆದ್ದರಿಂದ ಸತ್ಯವಿಶ್ವಾಸಿಗಳು

ಜನಸಾಮಾನ್ಯರ ವಿರುದ್ಧ ಶಾಪ ಪ್ರಾರ್ಥನೆ ಮಾಡಬಾರದು. ನಿಮಗಿಂತ ಹೆಚ್ಚು ಅಲ್ಲಾಹನಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಮೇಲೆ ಅಭಿಮಾನವಿದೆ. ಹೀಗಿದ್ದರೂ ಹಝ್ರತ್ ಮಸೀಹ್ ಮೌಊದ್(ಅ)ರನ್ನು ಸಂಬೋಧಿಸುತ್ತಾ ಅಲ್ಲಾಹನು ಹೇಳುತ್ತಾನೆ:

**ಏ ದಿಲ್ ತೂ ನೀಝ್ ಖ಼ಾತಿರ್ ಈನಾನ್ ನಿಗಾಹ್‌ದಾರ್;**

**ಕ ಆಖ಼ಿರ್ ಕುನಂದ್ ದಅ್‌ವೇ ಹುಬ್ಬೇ ಪೈಯಂಬರಂ.**

ಈ ಪಾರ್ಸಿ ಪದ್ಯ ಪಂಕ್ತಿಯಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರ ಹೃದಯವನ್ನು ಸಂಬೋಧಿಸುತ್ತಾ ಅವರ ನಾಲಗೆಯಿಂದಲೇ ಹೀಗೆ ಹೇಳಿಸುತ್ತಾನೆ: ಹೇ ನನ್ನ ಹೃದಯವೇ, ನೀನು ಈ ಜನರ ಹೃದಯ ಕೊಳಕಾಗದಿರಲು ಇವರ ಭಾವನೆಗಳ ಮತ್ತು ಸಂವೇದನೆಗಳ ಕುರಿತು ಕಾಳಜಿ ವಹಿಸಬೇಕು. ದುಃಖದಿಂದ ನೀನು ಅವರ ವಿರುದ್ಧ ಶಾಪ ಪ್ರಾರ್ಥನೆ ಮಾಡಬೇಡ. ಕೊನೆಗೂ ನಿನ್ನ ಪ್ರವಾದಿಯಾದ ಮುಹಮ್ಮದ್ ಪೈಗಂಬರ್(ಸ)ರನ್ನು ಅವರು ಪ್ರೀತಿಸುತ್ತಾರೆ ಮತ್ತು ಆ ಪ್ರೇಮದ ಕಾರಣದಿಂದಲೇ ಅವರು ನಿನ್ನನ್ನು ಬೈಯ್ಯುತ್ತಾರೆ.

ಇದೇ ಸತ್ಯ ಸಂಗತಿಯಾಗಿದೆ. ನಮ್ಮ ಎದುರಾಳಿಗಳಲ್ಲಿ ಒಂದು ವಿಭಾಗದವರು ಅನ್ಯಾಯವಾಗಿ ವಿರೋಧಿಸುತ್ತಾರೆ ಎಂದು ನಮಗೆ ಗೊತ್ತಿದೆ. ಪಾಕಿಸ್ತಾನ ಮತ್ತು ಲೋಕದ ಇತರ ದೇಶಗಳಲ್ಲೂ ಒಂದು ವಿಭಾಗದವರು ಈ ಮೌಲವಿಯರ ಬಲೆಯಲ್ಲಿ ಸಿಲುಕಿರುವವರು. ಅವರ ಈ ವಿರೋಧ ನಮ್ಮ ನೇತಾರರಾದ ಹಝ್ರತ್ ಪೈಗಂಬರ್(ಸ)ರೊಡನೆ ಇರುವ ಪ್ರೇಮದ ಕಾರಣದಿಂದಾಗಿದೆ. ನಾವು ಹಝ್ರತ್ ಪೈಗಂಬರ್(ಸ)ರನ್ನು ಪ್ರೀತಿಸುವವರಾಗಿದ್ದೇವೆ ಎಂದು ಇವರಿಗೆ ಗೊತ್ತಾದರೆ, ಅಹ್ಮದಿಯರನ್ನು ಸಹಾಯ ಮಾಡಬೇಕು ಎಂದು ಈ ಜನರು ಹೇಳುವರು. ಅಂತಹ ದಿನ ಖಂಡಿತ ಬರುವುದು ಮತ್ತು ಇನ್‌ಶಾ ಅಲ್ಲಾಹ್ ಒಂದು ದಿನ ಈ ವಿರೋಧ ಕೊನೆಗೊಳ್ಳುವುದು.

ಈ ಮೌಲವಿಯರು ನಮ್ಮ ವಿರುದ್ಧ ಹೇಳಿಕೆಯನ್ನು ನೀಡುವುದರ ಮೂಲಕ ನಮಗೆ ಪ್ರಯೋಜನವನ್ನು ನೀಡುವಂತಹ ಕೆಲಸವನ್ನು ಮಾಡುತ್ತಾರೆ. ಏಕೆಂದರೆ ಯಾವ ವಿಭಾಗದ ಜನರಿಗೆ ನಮ್ಮ ಸಂದೇಶ ತಲುಪಿಸುವುದು ಸುಲಭವಲ್ಲವೋ ಅವರಿಗೆ ಈ ವಿರೋಧಿ ಮೌಲವಿಗಳ ಮೂಲಕ ಈ ಕೆಲಸ ನಡೆಯುತ್ತಿದೆ. ನಮ್ಮ ಕೆಲಸ, ಸಹನೆ ಮತ್ತು ದುಆ ಮಾಡುವುದರೊಂದಿಗೆ ನಮ್ಮ ಆಲೋಚನೆಗಳನ್ನು ಮತ್ತು ಭಾವನೆಗಳನ್ನು ಸ್ವಚ್ಛವಾಗಿರಿಸುವುದಾಗಿದೆ. ಅಲ್ಲಾಹನು ಅವರ ಕಣ್ಣುಗಳನ್ನು ಬೇಗನೇ ತೆರೆಯಲಿ ಮತ್ತು ಅವರು ಕಾಲಘಟ್ಟದ ಇಮಾಮರನ್ನು ನಂಬುವವರೂ ಅರಿಯುವವರೂ ಆಗಲಿ ಎಂದು ಅವರಿಗಾಗಿ ದುಆ ಮಾಡಬೇಕು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَاءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 14-05-2021*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at:** www.alislam.org/friday-sermon